2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ,
ಚಿಕ್ಕಮಗಳೂರು

ಸತ್ರ ಮೊಕದ್ದಮೆ ನಂಃ 35/2019

| | | | |
|---|---|---|---|
| ಸಾಕ್ಷಿದಾರರ ಹೆಸರು | - | ಗೋಪಾಲ್ | ಪಿಡಬ್ಲೂ -12 |
| ತಂದೆಯ ಹೆಸರು | - | ವೈ ನಂಜಪ್ಪ | ಸಿಡಬ್ಲೂ -15 |
| ವಯಸ್ಸು | - | 61 ವರ್ಷ | |
| ಉದ್ಯೋಗ | - | ಚಿನ್ನ ಬೆಳ್ಳಿ ಕೆಲಸ | |
| ವಾಸ ಸ್ಥಳ | - | ಬೆಂಗಳೂರು | |

ದಿನಾಂಕಃ 17.10.2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ-

1. ನ್ಯಾಯಾಲಯದಲ್ಲಿ ಹಾಜರಿರುವ 1 ರಿಂದ 3 ನೇ ಆರೋಪಿತರು ಗೊತ್ತು. ಫಿರ್ಯಾದಿ.1 ಗೊತ್ತಿಲ್ಲ. ಮೃತ ರುದ್ರಸ್ವಾಮಿ ಗೊತ್ತಿಲ್ಲ.

2. ಬೆಂಗಳೂರಿನ ವಿದ್ಯಾರಣ್ಯಪುರದ ಚಾಮುಂಡೇಶ್ವರಿ ಬಡಾವಣೆಯಲ್ಲಿ ನನ್ನ ಸ್ವಂತ ಮನೆ ಇದೆ. ಅದರಲ್ಲಿ ಎರಡು ಮಹಡಿಗಳಿವೆ. ನೆಲ ಮಹಡಿಯಲ್ಲಿಎರಡು ಮನೆಗಳಿವೆ. ಅದರ ಪೈಕಿ ಒಂದನ್ನು ನಾನು 1 ನೇ ಆರೋಪಿ ಆಕೆಯ ಗಂಡ ಸ್ವಾಮಿ ರವರಿಗೆ ಬಾಡಿಗೆಗೆ ಕೊಟ್ಟಿದ್ದೆನು. ಅದರಲ್ಲಿ 1 ನೇ ಆರೋಪಿ, ಆಕೆಯ ಗಂಡ ಸ್ವಾಮಿ ಮತ್ತು ಅವರ ಮಗು ವಾಸವಾಗಿದ್ದರು. ಸದರಿ ಮನೆಯ ಮೊದಲನೇ ಮಹಡಿಯಲ್ಲಿ ನಾನು ವಾಸವಾಗಿದ್ದೇನೆ. ನೆಲಮಹಡಿಯಲ್ಲಿರುವ ಮತ್ತೊಂದು ಮನೆಯನ್ನು ಮುರಳಿ ಎನ್ನುವವರಿಗೆ ಬಾಡಿಗೆಗೆ ಕೊಟ್ಟಿದ್ದೆನು. 1 ನೇ ಆರೋಪಿ ಮತ್ತು ಆಕೆಯ ಗಂಡ ಸ್ವಾಮಿಗೆ 2014 ನೇ ಇಸವಿಯಲ್ಲಿ ಮನೆಯನ್ನು ಬಾಡಿಗೆಗೆ ಕೊಟ್ಟಿದ್ದೆನು. ನಂತರ ಅವರು 2018 ನೇ ಇಸವಿಯಲ್ಲಿ ಸದರಿ ಮನೆಯನ್ನು ಖಾಲಿ

ಮಾಡಿಕೊಂಡು ಊರಿಗೆ ಹೋಗುವುದಾಗಿ ಹೇಳಿ ಹೋದರು. ಆದರೆ ಅವರು ಯಾರ ಕಾರಣಕ್ಕೆ ಮನೆಯನ್ನು ಖಾಲಿ ಮಾಡಿಕೊಂಡು ಹೋದರು ಎಂದು ನನಗೆ ಗೊತ್ತಿಲ್ಲ.

3. 1 ನೇ ಆರೋಪಿ ಮತ್ತು ಆಕೆಯ ಗಂಡ ಸ್ವಾಮಿ ನಮ್ಮ ಮನೆಯನ್ನು ಖಾಲಿ ಮಾಡಿಕೊಂಡು ಹೋಗುವ ಮೊದಲೇ ಮುರುಳಿರವರು ತಮ್ಮ ಮನೆಯನ್ನು ಖಾಲಿ ಮಾಡಿಕೊಂಡು ಹೋಗಿದ್ದರು. ನಂತರ ಸದರಿ ಮನೆಯನ್ನು ನಾನು ಒಬ್ಬ ಗಂಡ ಹೆಂಡತಿಗೆ ಕೊಟ್ಟಿದ್ದೆನು ಆದರೆ ಅವರ ಹೆಸರು ನನಗೆ ನೆನಪಿಲ್ಲ.

4. ಸಾಕ್ಷಿಗೆ ಒಂದು ಫೋಟೋವನ್ನು ತೋರಿಸಿ ಅದರಲ್ಲಿ ಕಂಡು ಬರುವ ರುಂಡ ಯಾರದ್ದು ಎಂದು ಹೇಳಲಾಗುತ್ತದೆಯೇ ಎಂದು ಕೇಳಲಾಗಿ ನನಗೆ ಗೊತ್ತಿಲ್ಲ ಎನ್ನುತ್ತಾರೆ.

5. ಅಜ್ಜಂಪುರ ಪೊಲೀಸರು 1 ನೇ ಆರೋಪಿಯ ವಿರುದ್ಧ ಕೊಲೆ ಪ್ರಕರಣ ದಾಖಲಾಗಿದೆ ಎಂದು ಹೇಳಿ ಫೋನ್ ಮಾಡಿ ಅವರು ನಿಮ್ಮ ಮನೆಯಲ್ಲಿ ಇದ್ದರೇ ಎಂದು ಕೇಳಿದರು. ಆಗ ನಾನು ಮೇಲೆ ಹೇಳಿದಂತೆ ಆಕೆ ತನ್ನ ಗಂಡ ಮತ್ತು ಮಗುವಿನೊಂದಿಗೆ ನಮ್ಮ ಮನೆಯಲ್ಲಿ 4 ವರ್ಷ ಇದ್ದು ಹೋಗಿದ್ದಾಗಿ ತಿಳಿಸಿದ್ದೇನೆ. ಯಾರ ಕೊಲೆಯಾಗಿತ್ತು ಎಂದು ನನಗೆ ಮಾಹಿತಿ ತಿಳಿದಿಲ್ಲ. ನಾನು ಪೊಲೀಸರಿಗೆ ಯಾವುದೇ ಹೇಳಿಕೆಯನ್ನು ನೀಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಅಭಿಯೋಜಕರು ಅನುಮತಿ ಕೇಳಿರುತ್ತಾರೆ ದಾಖಲೆಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು)

<u>ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-</u>

6. 1 ನೇ ಆರೋಪಿ ಆಕೆಯ ಗಂಡ ಸ್ವಾಮಿ ಮತ್ತು ಅವರ ಮಗ

ಶ್ರೇಯಸ್ ನಿಮ್ಮ ಮನೆಯಲ್ಲಿ ಬಾಡಿಗೆಗೆ ವಾಸವಿದ್ದರು ಎಂದರೆ ಸರಿ. ನಿಮ್ಮ 1 ನೇ ಮಹಡಿಯಲ್ಲಿದ್ದ ರೂಮನ್ನು ಬಾಡಿಗೆಗೆ ಕೊಡುವಂತೆ 2018 ನೇ ಇಸವಿಯಲ್ಲಿ ಹೊನ್ನಾಳಿ ತಾಲ್ಲೂಕಿನ ಕೆಂಗಟ್ಟೆ ಗ್ರಾಮದ ವಾಸಿ ರುದ್ರಸ್ವಾಮಿ ಕೇಳಿಕೊಂಡಿದ್ದನು ಎಂದರೆ ಸರಿಯಲ್ಲ. ಅದರಂತೆ ನೀವು ರೂ.30,000/- ಅಡ್ವಾನ್ಸ್ ಅನ್ನು ನೀವು ಆತನಿಂದ ಪಡೆದುಕೊಂಡು ತಿಂಗಳಿಗೆ ರೂ.3,500/- ಬಾಡಿಗೆ ಮಾತನಾಡಿ ಆತನಿಗೆ ಸದರಿ ರೂಮನ್ನು ಬಾಡಿಗೆಗೆ ಕೊಟ್ಟಿದ್ದಿರಿ ಎಂದರೆ ಸರಿಯಲ್ಲ. ಸದರಿ ರುದ್ರಸ್ವಾಮಿ ಬೆಂಗಳೂರಿನ ದೊಡ್ಡಬೆಟ್ಟಹಳ್ಳಿಯಲ್ಲಿ ಐಶ್ವರ್ಯ ಕನ್ಸಲ್ಟೆನ್ಸಿ ಆಫೀಸ್ ಮಾಡಿಕೊಂಡಿರುವುದಾಗಿ ನಿಮಗೆ ತಿಳಿಸಿದ್ದರು ಎಂದರೆ ಸರಿಯಲ್ಲ. 1 ನೇ ಆರೋಪಿಯ ಗಂಡ ಸ್ವಾಮಿ ಬೆಂಗಳೂರಿನ ಯಾವುದೋ ಕಂಪೆನಿಯಲ್ಲಿ ಕೆಲಸ ಮಾಡುತ್ತಿದ್ದಾಗಿ ನಿಮಗೆ ತಿಳಿಸಿದ್ದರು ಎಂದರೆ ಸರಿಯಲ್ಲ. ರುದ್ರಸ್ವಾಮಿಯು 1 ನೇ ಆರೋಪಿಯ ಗಂಡ ಸ್ವಾಮಿಯನ್ನು ಪರಿಚಯ ಮಾಡಿಕೊಂಡು ಅವರ ಮನೆಗೆ ಆಗಾಗ ಹೋಗಿ ಬರುವುದು ಮಾಡುತ್ತಿದ್ದನು ಎಂದರೆ ಸರಿಯಲ್ಲ. 1 ನೇ ಆರೋಪಿಯ ಗಂಡ ಕೆಲಸದ ಮೇಲೆ ಆಗಾಗ್ಗೆ 3-4 ದಿವಸ ಹೊರಗೆ ಹೋಗುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಆ ಸಮಯದಲ್ಲಿ ಮೃತ ರುದ್ರಸ್ವಾಮಿಯು 1 ನೇ ಆರೋಪಿಯ ಮನೆಗೆ ಹೋಗಿ ಬರುತ್ತಿದ್ದನು ಎಂದರೆ ನನಗೆ ಗೊತ್ತಿಲ್ಲ. ರುದ್ರಸ್ವಾಮಿ ನಮ್ಮ ಮನೆಗೆ ಬಾಡಿಗೆಗೆ ಬಂದ ಸುಮಾರು 2 ತಿಂಗಳ ನಂತರ ಆತ 1 ನೇ ಆರೋಪಿಯ ಮನೆಗೆ ಹೋಗಿ ಆಗಾಗ್ಗೆ ಜಗಳ ಮಾಡುತ್ತಿದ್ದನು ಎಂದರೆ ಸರಿಯಲ್ಲ. ಆ ವಿಚಾರಕ್ಕೆ 2018 ನೇ ಇಸವಿ ಜುಲೈ ತಿಂಗಳಿನಲ್ಲಿ ಏಕಾಏಕಿ 1 ನೇ

ಆರೋಪಿಯ ಗಂಡ ಮನೆಯನ್ನು ಖಾಲಿ ಮಾಡಿಕೊಂಡು ಹೋದರು ಎಂದರೆ ಸರಿಯಲ್ಲ. ಅವರು ಹೋದ 1 ವಾರದಲ್ಲಿಯೇ ರುದ್ರಸ್ವಾಮಿ ಕೂಡ ನಿಮ್ಮ ರೂಮನ್ನು ಖಾಲಿ ಮಾಡಿಕೊಂಡು ಹೋದರು ಎಂದರೆ ಸರಿಯಲ್ಲ.

7. ದಿನಾಂಕ 13.11.2018 ರಂದು ಟಿ ವಿ ಮತ್ತು ನ್ಯೂಸ್ ಪೇಪರ್ ಗಳಲ್ಲಿ 1 ನೇ ಆರೋಪಿಯೊಂದಿಗೆ ರುದ್ರಸ್ವಾಮಿ ಅನೈತಿಕ ಸಂಬಂಧ ಬೆಳೆಸಿಕೊಂಡು ಆಕೆಯೊಂದಿಗಿದ್ದ ಫೋಟೋಗಳನ್ನು ಫೇಸ್ ಬುಕ್ ನಲ್ಲಿ ಹಾಕುತ್ತೇನೆಂದು ಹಿಂಸಿಸುತ್ತಿದ್ದರಿಂದ 1 ನೇ ಆರೋಪಿ, ಆಕೆಯ ತಂದೆ ತಾಯಿ ಮತ್ತು ತಮ್ಮ ಸೇರಿಕೊಂಡು ದಿನಾಂಕ 07.11.2018 ರಂದು ರುದ್ರಸ್ವಾಮಿಯನ್ನು ಬೆಂಕಿಕೆರೆಗೆ ಕರೆಯಿಸಿಕೊಂಡು ನಂತರ ಅವರ ಅಡಿಕೆ ತೋಟಕ್ಕೆ ಆತನನ್ನು ಕರೆದುಕೊಂಡು ಹೋಗಿ ಮಚ್ಚು ಮತ್ತು ಕುಡುಗೋಲಿನಿಂದ ಕುತ್ತಿಗೆ ಕಡಿದು ಬೇರ್ಪಡಿಸಿ ಕೊಲೆ ಮಾಡಿ ರುಂಡ ಮತ್ತು ಮುಂಡವನ್ನು ಚೀಲಗಳಲ್ಲಿ ತುಂಬಿಕೊಂಡು ಬುಕ್ಕಾಂಬುದಿ ಸಮೀಪದ ಬುಕ್ಕರಾಯನಕೆರೆಗೆ ಎಸೆದಿರುವುದಾಗಿ ತಿಳಿಯಿತು ಎಂದರೆ ಸರಿ. ನಂತರ ದಿನಾಂಕ 19.01.2019 ರಂದು ತರೀಕೆರೆ ವೃತ್ತ ನಿರೀಕ್ಷಕರು ನಿಮ್ಮನ್ನು ವಿಚಾರಿಸಿದ್ದಾರೆ ಎಂದರೆ ಸರಿಯಲ್ಲ. ಆಗ ನೀವು ನಿಮ್ಮ ಮನೆಯ ಮೊದಲನೇ ಮಹಡಿಯ ರೂಮನ್ನು ಮೃತ ರುದ್ರಸ್ವಾಮಿಗೆ ಬಾಡಿಗೆಗೆ ಕೊಟ್ಟಿದ್ದಾಗಿ ಮತ್ತು ಮೇಲಿನ ವಿಚಾರಗಳನ್ನು ತಿಳಿಸಿ ಹೇಳಿಕೆ ನೀಡಿದ್ದೀರಿ ಎಂದರೆ ಸರಿಯಲ್ಲ. ಸದರಿ ಸಾಕ್ಷಿಯ ಹೇಳಿಕೆಯನ್ನು ನಿಪಿ.23 ಎಂದು ಗುರುತಿಸಲಾಯಿತು.

8. ಮೃತ ರುದ್ರಸ್ವಾಮಿಗೆ ನಿಮ್ಮ ಮೊದಲನೇ ಮಹಡಿಯಲ್ಲಿದ್ದ ರೂಮನ್ನು ಬಾಡಿಗೆಗೆ ಕೊಟ್ಟಿದ್ದು ಆತ 1 ನೇ ಆರೋಪಿಯ ಮನೆಗೆ ಆಗಾಗ್ಗೆ ಹೋಗಿ ಬರುತ್ತಿದ್ದನ್ನು ನೀವು ನೋಡಿದ್ದು ಆ ಬಗ್ಗೆ ಪೊಲೀಸರಿಗೆ ನಿಪಿ.23 ರಂತೆ ಹೇಳಿಕೆಯನ್ನು ನೀಡಿದ್ದರೂ ಸಹ ಈಗ ಆರೋಪಿತರು ನಿಮಗೆ ಪರಿಚಯವಿರುವ ಕಾರಣ ಅವರೊಂದಿಗೆ ಶಾಮೀಲಾಗಿ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನಿಮಗೆ ತೋರಿಸಿದ ಫೋಟೋದಲ್ಲಿ ಕಂಡು ಬರುವ ರುಂಡ ರುದ್ರಸ್ವಾಮಿಗೆ ಸೇರಿದ್ದು ಎಂದು ಗೊತ್ತಿದ್ದರೂ ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ ಶ್ರೀ ಪಿ ಇ ಎಸ್ ವಕೀಲರಿಂದಃ **1** ನೇ ಆರೋಪಿ ಪರವಾಗಿಃ</u>

9. 1 ನೇ ಆರೋಪಿ ತನ್ನ ಗಂಡ ಮತ್ತು ಮಗುವಿನೊಂದಿಗೆ ನಿಮ್ಮ ಮನೆಯಲ್ಲಿ ಬಾಡಿಗೆಗೆ ವಾಸವಿದ್ದುದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಆಕೆ ನಿಮ್ಮ ಮನೆಯಲ್ಲಿ ವಾಸವಾಗಿದ್ದರು ಎಂದು ತೋರಿಸಲು ಆಕೆ ಅಥವಾ ಆಕೆಯ ಗಂಡ ನಿಮ್ಮೊಂದಿಗೆ ಮಾಡಿಕೊಂಡಿದ್ದ ಕರಾರು ಈಗ ನಿಮ್ಮ ಬಳಿ ಇದೆಯೇ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಟಿ ವಿ ಮತ್ತು ನ್ಯೂಸ್ ಪೇಪರ್ ಗಳಿಂದ ನಿಮಗೆ ಆರೋಪಿತರು ಸೇರಿ ರುದ್ರಸ್ವಾಮಿಯನ್ನು ಕೊಲೆ ಮಾಡಿದ ವಿಚಾರ ಗೊತ್ತಾಯಿತು ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ನಿಮಗೆ ಬಾಡಿಗೆಗೆ ಕೊಡುವಂತಹ ಯಾವುದೇ ಮನೆ ಇಲ್ಲದಿದ್ದರೂ ಸಹ ಪೊಲೀಸರೊಂದಿಗಿನ

ವಿಶ್ವಾಸದ ಮೇರೆಗೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ ಉಳಿದ ಆರೋಪಿತರ ಪರ ವಕೀಲರು ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.</u>

<u>ಮರು ವಿಚಾರಣೆಃ ಇಲ್ಲ</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)
ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ